Ministry of Skill Development & Entrepreneurship

SANKALP

RASCI Retailers Association's Skill Council of India

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

KARNATAKA SKILL DEVELOPMENT CORPORATION

# ಮಾದರಿ ಪಠ್ಯಕ್ರಮ

# MODEL CURRICULUM

# ಕೈಮಗ್ಗ ನೇಕಾರ (ನೆಲಹಾಸುಗಳು)

# Handloom Weaver (Carpets)

| | | |
|---|---|---|
| ವಲಯ (Sector) | : | ಕರಕುಶಲ ಮತ್ತು ನೆಲಹಾಸು (Handicraft and Carpet) |
| ಉಪ ವಲಯ (Sub-sector) | : | ನೆಲಹಾಸು (Carpet) |
| ಉದ್ಯೋಗ (Occupation) | : | ನೇಕಾರಿಕೆ (Weaving) |
| ಉಲ್ಲೇಖ ಗುರುತು (Ref ID) | : | HCS/Q5412 |

# Certificate

## CURRICULUM COMPLIANCE TO QUALIFICATION PACK – NATIONAL OCCUPATIONAL STANDARDS

is hereby issued by the

**HANDICRAFTS AND CARPET SECTOR SKILL COUNCIL**

for the

## MODEL CURRICULUM

Complying to National Occupational Standards of
Job Role/Qualification Pack: '**Handloom Weaver (Carpets)** QP No. '**HCS/ Q 5412 NSQF Level 3**'

Date of Issuance: **May 27th, 2015**

Valid up to: **May 26th , 2016**

** Valid up to the next review date of the Qualification Pack*

Authorized Signatory
Media and Entertainment Skill Council

# ಪರಿವಿಡಿ


1. ವ್ಯಾಸಂಗ ಕ್ರಮ 01

2. ತರಬೇತಿದಾರರ ಪೂರ್ವಾಪೇಕ್ಷಿತ ಅರ್ಹತೆಗಳು 05

3. ಅನುಬಂಧ: ಮೌಲ್ಯಮಾಪನ ಮಾನದಂಡ 06

# ಕೈಮಗ್ಗ ನೇಕಾರ (ನೆಲಹಾಸುಗಳು)

## ವ್ಯಾಸಂಗ ಕ್ರಮ / ಪಠ್ಯಕ್ರಮ

ಈ ಕಾರ್ಯಯೋಜನೆಯನ್ನು, ಅಭ್ಯರ್ಥಿಗಳು "ಕರಕುಶಲ ಮತ್ತು ನೆಲಹಾಸು;; ವಲಯದ/ ಕೈಗಾರಿಕೆಯ ಅಡಿಯಲ್ಲಿ "ಕೈಮಗ್ಗ ನೇಕಾರ" ಉದ್ಯೋಗಕ್ಕೆ ಅಗತ್ಯ ತರಬೇತಿ ಪಡೆಯಲೆಂಬ ಉದ್ದೇಶದಿಂದ ಸಿದ್ಧಪಡಿಸಲಾಗಿದೆ ಮತ್ತು ಅಭ್ಯರ್ಥಿಗಳಿಗೆ ಈ ಕೆಳಕಂಡ ಕೌಶಲ್ಯಗಳನ್ನು ಕಲಿಸಿಕೊಡುವ ಗುರಿಯನ್ನು ಹೊಂದಿದೆ.

<table>
<tr><th>ಕಾರ್ಯಯೋಜನೆಯ ಹೆಸರು:</th><th colspan="3">ಕರಕುಶಲ ಮತ್ತು ನೆಲಹಾಸು ವಲಯ</th></tr>
<tr><td>ವಿದ್ಯಾರ್ಹತೆ ಪ್ಯಾಕ್ ಹೆಸರು ಮತ್ತು ಉಲ್ಲೇಖ ಸಂಖ್ಯೆ:</td><td colspan="3">REF ID: HCS/Q5412, v1.</td></tr>
<tr><td>ಆವೃತ್ತಿ ಸಂಖ್ಯೆ:</td><td>1.01</td><td>ಆವೃತ್ತಿ ಪರಿಷ್ಕರಣೆ ದಿನಾಂಕ:</td><td>26.05.2016</td></tr>
<tr><td>ತರಬೇತಿಗೆ ಪೂರ್ವಾಪೇಕ್ಷಿತ ಅರ್ಹತೆ:</td><td colspan="3">ಕನಿಷ್ಠ ಸಾಕ್ಷರತೆ, 5ನೆಯ ತರಗತಿ ಉತ್ತೀರ್ಣವಾಗಿದ್ದರೆ ಒಳ್ಳೆಯದು.</td></tr>
<tr><td>ತರಬೇತಿಯ ಫಲಿತಾಂಶ:</td><td colspan="3">ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಕೆಳಗಿನ ವಿಷಯಗಳನ್ನು ಕಲಿಯುತ್ತಾರೆ:<br>* ನೆಲಹಾಸು ವಲಯದ ಬಗ್ಗೆ ಪರಿಚಯ: ನೆಲಹಾಸು ವಲಯದ ಬಗ್ಗೆ ಸಾಮಾನ್ಯ ಪರಿಚಯ. ಬಗೆ ಬಗೆಯ ವಿಧದ, ಕೈಯಿಂದ ತಯಾರಿಸಿದ ನೆಲಹಾಸುಗಳ ಬಗ್ಗೆ ಮತ್ತು ಅವುಗಳ ವಿನ್ಯಾಸದ ಪರಂಪರೆಯ ಬಗ್ಗೆ ಪರಿಚಯ.<br>* ಕೈಮಗ್ಗದಲ್ಲಿ ಸಿದ್ಧಪಡಿಸುವ ನೆಲಹಾಸುಗಳ ಉತ್ಪನ್ನ ಪ್ರಕ್ರಿಯೆಗಳ ಬಗ್ಗೆ ಸಂಪೂರ್ಣ ವಿವರಣೆ: ಕೈಯಿಂದ ಹೆಣೆಯುವ, ಕೈಮಗ್ಗದಲ್ಲಿ ತಯಾರಿಸುವ ನೆಲಹಾಸುಗಳ ನೇಯ್ಗೆ/ ಉತ್ಪಾದನೆಯ ಎಲ್ಲಾ ಪ್ರಕ್ರಿಯೆಗಳ ನಾನಾ ಹಂತಗಳ ಕುರಿತಂತೆ ಮೂಲಭೂತ ಪರಿಚಯ ಹಾಗೂ ನೆಲಹಾಸುಗಳ ತಯಾರಿಕೆಯಲ್ಲಿ ಬಳಸುವ ನೂಲುಗಳ ಆಯ್ಕೆಯ ಬಗ್ಗೆ ಪರಿಚಯ.<br>* ಕೈಯಿಂದ ನೆಯ್ಯುವ ನೆಲಹಾಸುಗಳನ್ನು ತಯಾರಿಸುವ ಕೈಮಗ್ಗದ ಆಯ್ಕೆ, ಅರ್ಥ ಮಾಡಿಕೊಳ್ಳುವಿಕೆ, ಅವುಗಳ ಭಾಗಗಳ ಮತ್ತು ಪೂರಕ ಸಲಕರಣೆಗಳ ಬಗ್ಗೆ ಅರಿವು: ಕೈಮಗ್ಗದ ಪರಿಣಾಮಕಾರಿ ಆಯ್ಕೆ, ಸೂಕ್ತವಾದ ಬಳಕೆ, ಸಲಕರಣೆಗಳ ಬಗ್ಗೆ ಅರಿವು ಮತ್ತು ಸೂಕ್ತ ಬಳಕೆ. ಕೈಮಗ್ಗದ ಭಾಗಗಳನ್ನು ಗುರುತಿಸುವಿಕೆ ಹಾಗೂ ಅವುಗಳ ಕಾರ್ಯವಿಧಾನವನ್ನು ಅರ್ಥಮಾಡಿಕೊಳ್ಳುವಿಕೆ.<br>* ಉತ್ಪಾದನಾ ಪೂರ್ವ ಸಿದ್ಧತಾ ಪ್ರಕ್ರಿಯೆಗಳನ್ನು ಕೈಗೊಳ್ಳುವಿಕೆ: ನೆಲಹಾಸುಗಳ ವಿನ್ಯಾಸ ಪರಿಕಲ್ಪನೆ, ಹೆಣಿಗೆ ಗಂಟುಗಳ ಸಾಂದ್ರತೆ, ರಾಶಿಯ (ನೂಲುರಾಶಿ–ಪೈಲ್) ಎತ್ತರ ಹಾಗೂ ನೆಲಹಾಸು ವಿನ್ಯಾಸಗಳ ಚಿತ್ತಾರಗಳನ್ನು ಬಲಪಡಿಸುವಿಕೆ. ನೂಲುಹಾಸುಗಳನ್ನು ಹೆಣೆದು ಮಗ್ಗದಲ್ಲಿ ದಾರವಾಗಿ ಎಳೆಯುವ (ಡ್ರಾಯಿಂಗ್) ಪ್ರಕ್ರಿಯೆಗಳನ್ನು ಹಂತ ಹಂತವಾಗಿ ಜಾರಿ ಮಾಡುವಿಕೆ.<br>* ಕೈಮಗ್ಗದಲ್ಲಿ ನೆಲಹಾಸನ್ನು ನೇಯುವುದು: ಕೊಡಮಾಡಲಾದ ಮಾನದಂಡಕ್ಕೆ ಅನುಗುಣವಾಗಿ, ಕೈಯಿಂದ ಹೆಣೆಯುವ ನೆಲಹಾಸನ್ನು ಕೈಮಗ್ಗದಲ್ಲಿ ನೇಯುವ ಪ್ರಕ್ರಿಯೆಯಲ್ಲಿನ ಎಲ್ಲಾ ಹಂತಗಳನ್ನು ಅರ್ಥ ಮಾಡಿಕೊಂಡು ಜಾರಿಮಾಡುವುದು. ನೆಲಹಾಸಿನ ತಯಾರಿಕೆಯಲ್ಲಿ ಉಪಯೋಗಿಸುವ ಬಗೆಬಗೆಯ ಹೆಣಿಗೆಗಳನ್ನು ಅರ್ಥಮಾಡಿಕೊಳ್ಳುವುದು.<br>* ಕೈ ಹೆಣಿಗೆಯ ನೆಲಹಾಸುಗಳ ಗುಣಮಟ್ಟ ಆಯಾಮಗಳ ಗುರುತಿಸುವಿಕೆ ಹಾಗೂ ಮೌಲ್ಯಮಾಪನ: ಕೈ ಹೆಣಿಗೆಯ ನೆಲಹಾಸುಗಳನ್ನು ತಯಾರಿಸುವಾಗ ಉಂಟಾಗುವ ಗುಣಮಟ್ಟದ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ತಿಳಿಯುವಿಕೆ ಮತ್ತು ಅವುಗಳನ್ನು ಸರಿಪಡಿಸುವಿಕೆ, ಒಪ್ಪಿತವಾಗುವ ಹಾಗೂ ಒಪ್ಪಿತವಾಗದ ಹೆಣಿಗೆಗಳ ನಡುವಿನ ಅಂತರ ಗುರುತಿಸುವಿಕೆ.<br>* ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಮಾನವೀಕ ಕೌಶಲ್ಯಗಳ ಬಳಕೆ: ವೃತ್ತಿಯ ನೈತಿಕ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವಿಕೆ ಹಾಗೂ ತಂಡಗಾರಿಕೆಯಲ್ಲಿ ಅದರ ಮಹತ್ವದ ಬಗ್ಗೆ ತಿಳಿಯುವಿಕೆ. ಒಳ್ಳೆಯ ಸಂವಹನ ಕೌಶಲ್ಯದ ಅಳವಡಿಕೆ ಹಾಗೂ ವ್ಯಕ್ತಿಗತ ಸಂಬಂಧಗಳ ನಿರ್ವಹಣೆ. ಆರೋಗ್ಯಕರ ಹಾಗೂ ನೈರ್ಮಲ್ಯದ ಬದುಕಿನ ಮಹತ್ವಗಳ ಬಗ್ಗೆ ಅರಿವು. ಕೆಲಸ ಸಂಬಂಧಿತ ಒತ್ತಡಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸಹಕಾರಿಯಾಗುವಂತೆ ಸಾಮಾನ್ಯ ಸುರಕ್ಷತಾ ನಿಯಮಗಳ ಬಗ್ಗೆ ಅರಿವು, ಗೌರವ ಮತ್ತು ಅವುಗಳ ಕಟ್ಟುನಿಟ್ಟಿನ ಪಾಲನೆ.</td></tr>
</table>

ಈ ಪಠ್ಯಕ್ರಮವು "ಕರಕುಶಲ ಮತ್ತು ನೆಲಹಾಸು ವಲಯದ ಕೌಶಲ್ಯ ಸಮಿತಿಯು "ಕೈಮಗ್ಗ ನೇಕಾರ (ನೆಲಹಾಸು)" ಅರ್ಹತಾ ಸಮೂಹಕ್ಕೆ ನಿಗದಿಪಡಿಸಿರುವ ರಾಷ್ಟ್ರೀಯ ಔದ್ಯೋಗಿಕ ಮಾನದಂಡ(ರಾ.ಔ.ಮಾ)ಗಳಲ್ಲಿನ 5ಕ್ಕೆ 5 ಅಂಶಗಳನ್ನು ಒಳಗೊಂಡಿದೆ.

| ಕ್ರ. ಸಂ. | ಘಟಕ | ಮುಖ್ಯವಾದ ಕಲಿಕೆಗಳು | ಬೇಕಿರುವ ಸಾಧನ ಸಾಮಗ್ರಿಗಳು |
|---|---|---|---|
| 1 | **ನೆಲಹಾಸುಗಳ ಬಗ್ಗೆ ಪರಿಚಯ**<br>**ಬೋಧನೆಯ ಅವಧಿ:** (ಗಂ:ನಿ) 10:00<br>**ಪ್ರಾಯೋಗಿಕ ತರಗತಿಗಳ ಅವಧಿ** (ಗಂ:ನಿ) 10:00<br>**ಸಂಬಂಧಿಸಿದ ರಾ.ಔ.ಮಾ ಸಂಕೇತ: ಸಂಪರ್ಕ ಸೇತು ಘಟಕ** | * ನೆಲಹಾಸುಗಳು ಮತ್ತು ನೆಲಹಾಸು ವಲಯದ ನಿಕಟ ಪರಿಚಯ<br>* ಭಾರತದಲ್ಲಿ ನೆಲಹಾಸುಗಳ ವಿನ್ಯಾಸಗಳ ನಿಕಟ ಪರಿಚಯ<br>* ವಿನ್ಯಾಸಗಳು, ವರ್ಣಗಳು ಮತ್ತು ಆಶಯಗಳನ್ನು ಅರ್ಥ ಮಾಡಿಕೊಳ್ಳುವುದು<br>* ಕೈ ಹೆಣಿಗೆಯ ನೆಲಹಾಸುಗಳ ಉತ್ಪಾದನಾ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು.<br>* ನೆಲಹಾಸುಗಳ ತಯಾರಿಕೆಯಲ್ಲಿ ಬಳಸುವ ಬಗೆಬಗೆಯ ನೂಲುಗಳನ್ನು ಗುರುತಿಸುವುದು ಹಾಗೂ ಅವುಗಳ ವಿವರಗಳನ್ನು ತಿಳಿಯುವುದು | ನೋಟ್ ಪುಸ್ತಕಗಳು, ಲೇಖನಿ, ಪೆನ್ಸಿಲ್, ಬಿಳಿ ಹಲಗೆ, ಮಾರ್ಕರ್ ಪೆನ್ನು, ನೆಲಹಾಸು ನಮೂನೆಗಳು, ನೂಲುಗಳು |
| 2 | **ಕೈಮಗ್ಗವನ್ನು ಪರಿಣಾಮಕಾರಿಯಾಗಿ ನಡೆಸುವುದು**<br>**ಬೋಧನೆಯ ಅವಧಿ:** (ಗಂ:ನಿ) 20:00<br>**ಪ್ರಾಯೋಗಿಕ ತರಗತಿಗಳ ಅವಧಿ** (ಗಂ:ನಿ) 160:00<br>**ಸಂಬಂಧಿಸಿದ ರಾ.ಔ.ಮಾ ಸಂಕೇತ:** HCS/N5415 | * ಕೈಮಗ್ಗದ ಬೇರೆ ಬೇರೆ ಭಾಗಗಳನ್ನು ಗುರುತಿಸುವುದು ಮತ್ತು ಅವುಗಳ ಕಾರ್ಯವಿಧಾನವನ್ನು ತಿಳಿಯುವುದು<br>* ನೆಲಹಾಸನ್ನು ನೇಯುವಾಗ ಬಳಸುವ ಬೇರೆ ಬೇರೆ ಸಲಕರಣೆಗಳನ್ನು ಗುರುತಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು<br>* ಸಲಕರಣೆಗಳ ಸರಿಯಾದ ನಿರ್ವಹಣೆಯನ್ನು ಅರ್ಥಮಾಡಿಕೊಳ್ಳುವುದು.<br>* ನೆಲಹಾಸುಗಳ ಬಗೆಬಗೆಯ ಚಿತ್ತಾರಗಳ ನಿಕಟ ಪರಿಚಯ<br>* ವಿನ್ಯಾಸ ನಕ್ಷೆಗಳ (ಡಿಸೈನ್ ಗ್ರಾಫ್) ನಿಕಟ ಪರಿಚಯ ಮತ್ತು ಅವುಗಳ ಬಳಕೆಯನ್ನು ಅರ್ಥ ಮಾಡಿಕೊಳ್ಳುವುದು<br>* ಹೆಣಿಗೆ ಗಂಟುಗಳ ಸಾಂದ್ರತೆ ಹಾಗೂ ರಾಶಿಯ (ನೂಲುರಾಶಿ) ಎತ್ತರಗಳನ್ನು ಮತ್ತವುಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳುವುದು<br>* ನೂಲುಹಾಸು(ವಾರ್ಪ್)ಗಳನ್ನು ಮಗ್ಗದಲ್ಲಿ ದಾರವಾಗಿ ಎಳೆಯುವ ಪ್ರಕ್ರಿಯೆಗಳನ್ನು ಹಂತ ಹಂತವಾಗಿ ಅರ್ಥ ಮಾಡಿಕೊಳ್ಳುವುದು.<br>* ಹಾಸುನೂಲಿಗೆ ನೂಲನ್ನು ಹೆಣೆಯಲು ಬಳಸುವ ಪರ್ಷಿಯನ್ ಹೆಣಿಗೆ, ಟರ್ಕಿಶ್ ಹೆಣಿಗೆ ಹಾಗೂ ಟಿಬೆಟಿಯನ್ ಹೆಣಿಗೆಗಳನ್ನು ಅರ್ಥ ಮಾಡಿಕೊಳ್ಳುವುದು.<br>* ಕೊಟ್ಟಿರುವ ವಿಶಿಷ್ಟ ವಿವರಣೆಗಳಿಗೆ ತಕ್ಕಂತೆ ನೆಲಹಾಸನ್ನು ಹೆಣೆಯುವುದನ್ನು ಅಭ್ಯಾಸ ಮಾಡುವುದು<br>* ನೂಲುಹಾಸುಗಳನ್ನು ಸಿದ್ಧಪಡಿಸಿ ಮಗ್ಗದಲ್ಲಿ ದಾರವಾಗಿ ಎಳೆಯುವ ಪ್ರಕ್ರಿಯೆಯನ್ನು ಅಭ್ಯಾಸ ಮಾಡುವುದು.<br>* ಬಳಸಲ್ಪಡುವ ವಿವಿಧ ಬಗೆಯ ಹೆಣಿಗೆಗಳನ್ನು ಅಭ್ಯಾಸ ಮಾಡುವುದು.<br>* ನೆಲಹಾಸನ್ನು ಹೆಣೆಯುವಾಗ ಎದುರಾಗುವ ಬಗೆಬಗೆಯ ಕುಂದುಕೊರತೆಗಳನ್ನು ಅರ್ಥ ಮಾಡಿಕೊಳ್ಳುವುದು (ನೂಲುಹಾಸಿನ ತುಂಡರಿಸುವಿಕೆ, ಬಿಗಿತದ (ಟೆನ್ಷನ್) ಸಮಸ್ಯೆಗಳು, ನೆಲಕ್ಕೆ ಬೀಳಲ್ಪಟ್ಟ ನೂಲಿನ ಉಂಡೆ, ತೆಳುವಾದ ನೂಲಿನ ತುದಿ, ಡೈ ಬ್ಯಾಂಡ್, ಎಣ್ಣೆ ಕಲೆಗಳು, ಅಸಮರ್ಪಕ ನೂಲುರಾಶಿ.. ಇತ್ಯಾದಿ)<br>* ಕುಂದುಕೊರತೆಗಳ ಬಗೆಗಳನ್ನು ಮತ್ತು ಮತ್ತು ಪರಿಹಾರಗಳನ್ನು ಅರ್ಥ ಮಾಡಿಕೊಳ್ಳುವುದು<br>* ಒಪ್ಪಿತವಾಗುವ ಹಾಗೂ ಒಪ್ಪಿತವಾಗದ ಕುಂದುಕೊರತೆಗಳುಳ್ಳ ನೆಲಹಾಸುಗಳ ನಡುವಿನ ವ್ಯತ್ಯಾಸ ಗುರುತಿಸುವುದು. | ಮಗ್ಗ ಮತ್ತು ಅದಕ್ಕೆ ಸಂಬಂಧಿಸಿದ ಭಾಗಗಳು, ರೀಡ್ ಹುಕ್, ಇಂಚು ಪಟ್ಟಿ, ಕತ್ತರಿ, ನೂಲು, ಸುರುಳಿ ಸುತ್ತುವ ಉಪಕರಣ, ವಾರ್ಪಿಂಗ್ ತಂತ್ರಜ್ಞತೆ ಮತ್ತು ಬಾಚಣಿಗೆ/ಪಂಜಾ |
| 3 | **ಕೆಲಸದ ಜಾಗ, ಸಲಕರಣೆಗಳು ಹಾಗೂ ಯಂತ್ರಗಳ ನಿರ್ವಹಣೆ** | * ಯಂತ್ರಗಳು, ವಸ್ತುಗಳು, ಸಲಕರಣೆಗಳು ಮೊದಲಾದವನ್ನು ಜತನದಿಂದ ಕಾಪಾಡಿಕೊಳ್ಳುವುದು ಹಾಗೂ ಸೂಕ್ತವಾಗಿ ಬಳಸುವುದು | ಲ್ಯಾಪ್‌ಟಾಪ್, ಬಿಳಿ ಹಲಗೆ, ಮಾರ್ಕರ್, ಪ್ರೊಜೆಕ್ಟರ್ |

| ಕ್ರ. ಸಂ. | ಘಟಕ | ಮುಖ್ಯವಾದ ಕಲಿಕೆಗಳು | ಬೇಕಿರುವ ಸಾಧನ ಸಾಮಗ್ರಿಗಳು |
|---|---|---|---|
| | **ಬೋಧನೆಯ ಅವಧಿ:**<br>(ಗಂ:ನಿ)<br>05:00<br>**ಪ್ರಾಯೋಗಿಕ ತರಗತಿಗಳ ಅವಧಿ**<br>(ಗಂ:ನಿ)<br>15:00<br>**ಸಂಬಂಧಿಸಿದ ರಾ.ಔ.ಮಾ ಸಂಕೇತ:**<br>HCS/N9906 | * ಯಂತ್ರಗಳು, ವಸ್ತುಗಳು, ಸಲಕರಣೆಗಳು ಮೊದಲಾದವನ್ನು ಜತನದಿಂದ ಕಾಪಾಡಿಕೊಳ್ಳುವುದು ಹಾಗೂ ಸೂಕ್ತವಾಗಿ ಬಳಸುವುದು<br>* ಕೆಲಸದ ಸ್ಥಳವನ್ನು ಚೊಕ್ಕಟವಾಗಿ ಸುರಕ್ಷಿತವಾಗಿ ಇಟ್ಟುಕೊಳ್ಳುವುದು<br>* ನಿಗದಿಪಡಿಸಿದಂತೆ ಯಂತ್ರೋಪಕರಣಗಳ ನಿರ್ವಹಣೆಯನ್ನು ಗೊತ್ತುಮಾಡಿದ ಅವಧಿಯೊಳಗೆ ಪೂರ್ಣಗೊಳಿಸುವುದು.<br>* ಒಬ್ಬರ ಹೊಣೆಗಾರಿಕೆಯ ಅಡಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಮಾಡುವುದು ಮತ್ತು/ಅಥವಾ ಶುಚಿ ಮಾಡುವುದು.<br>* ಅಸುರಕ್ಷಿತ ಯಂತ್ರೋಪಕರಣಗಳು/ ಘಟನೆಗಳನ್ನು ಕೂಡಲೇ ವರದಿ ಮಾಡುವುದು.<br>* ಮಾಡುವ ಕೆಲಸಗಳನ್ನು ಸುಸ್ಥಿತಿಯಲ್ಲಿರುವ ಮತ್ತು ಚೊಕ್ಕಟವಾಗಿರುವ ಸಲಕರಣೆಗಳನ್ನು ಹಾಗೂ ವಿಧಾನಗಳನ್ನು ಬಳಸಿ ಮಾಡುವುದು.<br>* ತ್ಯಾಜ್ಯವನ್ನು ಗೊತ್ತುಮಾಡಿದ ಸ್ಥಳದಲ್ಲಿ ಗೊತ್ತು ಮಾಡಿದ ವಿಧಾನದಂತೆ ವಿಸರ್ಜಿಸುವುದು.<br>* ಯಂತ್ರೋಪಕರಣ/ ಸಲಕರಣೆಗಳನ್ನು ಬಳಸಿದ ನಂತರ ಶುಚಿಗೊಳಿಸಿ ಸ್ವಸ್ಥಾನದಲ್ಲಿ ಇಡುವುದು. | ಪ್ರೊಜೆಕ್ಟರ್, ಅಗ್ನಿಶಾಮಕಗಳು, ಮೊದಲಾರೈಕೆ ಕಿಟ್‌ಗಳು, ಕನ್ನಡಕ–ಕೈ ಗವುಸು ಮೊದಲದ ಸುರಕ್ಷತಾ ಸಾಮಗ್ರಿಗಳು, ಶುಚಿತ್ವದ ಸಲಕರಣೆಗಳು, ವಿದ್ಯುತ್ ಟೆಸ್ಟರ್, ಅಪಘಾತ ವರದಿ ಹಾಳೆಗಳು |
| 4 | **ಕೆಲಸದ ಸ್ಥಳದಲ್ಲಿ ಆರೋಗ್ಯ, ಸುರಕ್ಷತೆ ಹಾಗೂ ಭದ್ರತೆಗಳ ನಿರ್ವಹಣೆ**<br>**ಬೋಧನೆಯ ಅವಧಿ:**<br>(ಗಂ:ನಿ)<br>05:00<br>**ಪ್ರಾಯೋಗಿಕ ತರಗತಿಗಳ ಅವಧಿ**<br>(ಗಂ:ನಿ)<br>15:00<br>**ಸಂಬಂಧಿಸಿದ ರಾ.ಔ.ಮಾ ಸಂಕೇತ:**<br>HCS/N9907 | * ಚೂಪಾದ ಯಂತ್ರೋಪಕರಣ, ಸಲಕರಣೆಗಳಿಂದ ಗಾಯಗಳಾಗಬಹುದಾದ ಸಾಧ್ಯತೆಗಳಿರುವ ಚಟುವಟಿಕೆಗಳನ್ನು ಗುರುತಿಸುವುದು.<br>* ಮುಖ ಗವುಸು ಮೊದಲಾದ ವೈಯುಕ್ತಿಕ ಸುರಕ್ಷತಾ ಸಲಕರಣೆಗಳ ಸುಸ್ಥಿತಿಯನ್ನು ಕಾಯ್ದುಕೊಳ್ಳುವುದು.<br>* ಕೆಲಸದ ಸ್ಥಳದಲ್ಲಿ ನೈರ್ಮಲ್ಯವಿಲ್ಲದ ಹಾಗೂ ಅಪಾಯಕಾರಿಯಾದ ಸ್ಥಳಗಳನ್ನು ಗುರುತಿಸುವುದು.<br>* ಯಂತ್ರಗಳ ಮತ್ತು ಅವುಗಳ ಭಾಗಗಳ ಸವಕಳಿಯಿಂದಾಗಿ ಉಂಟಾಗಬಹುದಾದ ಅಪಾಯಗಳನ್ನು ಗುರುತಿಸಲು ನಿಯಮಿತವಾಗಿ ತಪಾಸಣೆ ನಡೆಸುವುದು<br>* ನಾವು ಬಳಸುವ ಸಾಮಾಗ್ರಿಗಳು, ಕೆಲಸದ ಜಾಗ ಅಥವಾ ಕಾರ್ಯ ವಿಧಾನಗಳಲ್ಲಿ ಇರಬಹುದಾದ ಅಪಾಯ ಉಂಟುಮಾಡಬಲ್ಲ ಸ್ಥಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ವರದಿ ಮಾಡುವುದು.<br>* ಸಲಕರಣೆಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇದ್ದಲ್ಲಿ ಸಂಬಂಧಿಸಿದ ಮೇಲ್ವಿಚಾರಕರಿಗೆ ಕೂಡಲೇ ಮಾಹಿತಿ ನೀಡುವುದು.<br>* ಸಲಕರಣೆಗಳ ಮೇಲೆ ನೀಡಿರುವ ಬಳಸುವ ವಿಧಾನಗಳ ಬಗ್ಗೆ ವಿಶೇಷ ಕಾಳಜಿ ತೋರಿ, ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು<br>* ರಾಸಾಯನಿಕಗಳು ನೆಲದ ಮೇಲೆ ಚೆಲ್ಲಿ ಅಪಘಾತಗಳುಂಟಾಗುವ ಸನ್ನಿವೇಶಗಳು ಹುಟ್ಟದಂತೆ ಕೆಲಸದ ಪರಿಸರವನ್ನು ಚೊಕ್ಕಟವಾಗಿಯೂ ಸುರಕ್ಷಿತವಾಗಿಯೂ ಇಟ್ಟುಕೊಳ್ಳುವುದು<br>* ವೈಯುಕ್ತಿಕ ನೈರ್ಮಲ್ಯದ ಅತ್ಯುತ್ತಮ ಮಟ್ಟವನ್ನು ಸದಾ ಪಾಲಿಸುತ್ತಾ ಕಾಯ್ದುಕೊಳ್ಳುವುದು. | ಲ್ಯಾಪ್‌ಟಾಪ್, ಬಿಳಿ ಹಲಗೆ, ಮಾರ್ಕರ್, ಪ್ರೊಜೆಕ್ಟರ್, ಅಗ್ನಿಶಾಮಕಗಳು, ಮೊದಲಾರೈಕೆ ಕಿಟ್‌ಗಳಾದ ಕನ್ನಡಕ–ಕೈ ಗವುಸು, ಮುಖ ಗವುಸು ಮೊದಲದ ಸುರಕ್ಷತಾ ಸಾಮಗ್ರಿಗಳು |
| 5 | **ತಂಡದಲ್ಲಿ ಕೆಲಸ ಮಾಡುವುದು**<br>**ಬೋಧನೆಯ ಅವಧಿ:**<br>(ಗಂ:ನಿ) 05:00<br>**ಪ್ರಾಯೋಗಿಕ ತರಗತಿಗಳ ಅವಧಿ**<br>(ಗಂ:ನಿ) 15:00 | * ಒಟ್ಟು ಪ್ರಕ್ರಿಯೆಯಲ್ಲಿ ತನ್ನ ಸಂಪೂರ್ಣ ಪಾತ್ರವನ್ನು ಅರಿತಿದ್ದು ಹೊಣೆಗಾರಿಕೆ ಹೊಂದಿರುವುದು<br>* ಎಲ್ಲಾ ಜವಾಬ್ದಾರಿಗಳನ್ನೂ ಹೊಣೆಗಾರಿಕೆಯಿಂದ ನಿಭಾಯಿಸುವುದು<br>* ಪ್ರಕ್ರಿಯೆಯಲ್ಲಿ ಎದುರಾಗುವ ಯಾವುದೇ ಸಮಸ್ಯೆಗಳನ್ನು ತಕ್ಷಣವೇ ವರದಿ ಮಾಡುವುದು<br>* ಇನ್ನಿತರ ಸಹೋದ್ಯೋಗಿಗಳ ಹಾಗೂ ಸಹವರ್ತಿಗಳ ಜೊತೆ ಸೌಜನ್ಯದಿಂದ ಮಾತಾಡುವುದು.<br>* ತಮ್ಮ ಚಟುವಟಿಕೆಗಳ ಪ್ರಗತಿಯ ಬಗ್ಗೆ ಪ್ರತಿದಿನದ ವರದಿ ಸಲ್ಲಿಸುವುದು<br>* ವಿಭಿನ್ನ ಕೆಲಸದ ಪರಿಸರಗಳಿಗೆ ಹೊಂದಿಕೊಳ್ಳುವುದು<br>* ಮತ್ತೊಬ್ಬರ ದೃಷ್ಟಿಕೋನಕ್ಕೆ ಸೂಕ್ತ ಮನ್ನಣೆ/ ಮಹತ್ವ ನೀಡುವುದು. | ಲ್ಯಾಪ್‌ಟಾಪ್, ಬಿಳಿ ಹಲಗೆ, ಮಾರ್ಕರ್, ಪ್ರೊಜೆಕ್ಟರ್ |

| ಕ್ರ. ಸಂ. | ಘಟಕ | ಮುಖ್ಯವಾದ ಕಲಿಕೆಗಳು | ಬೇಕಿರುವ ಸಾಧನ ಸಾಮಗ್ರಿಗಳು |
|---|---|---|---|
| | **ಸಂಬಂಧಿಸಿದ ರಾ.ಔ.ಮಾ ಸಂಕೇತ:**<br>HCS/N9908 | * ಸಂಘರ್ಷದ/ ತಿಕ್ಕಾಟದ ಸನ್ನಿವೇಶಗಳನ್ನು ತಪ್ಪಿಸುವುದು<br>* ಪ್ರಕ್ರಿಯೆಯ ಕಾರ್ಯವಿಧಾನದ ಹೊಸ ಬಗೆಗಳನ್ನು ಅಭಿವೃದ್ಧಿ ಪಡಿಸುವುದು<br>* ಕಾರ್ಯಕ್ಷಮತೆಯ ಪ್ರಕ್ರಿಯೆಯನ್ನು ಹೆಚ್ಚಿಸಲು ಪ್ರಚಲಿತವಿರುವ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದು. | |
| 6 | **ಸಂಸ್ಥೆ ಹಾಗೂ ಕೈಗಾರಿಕೆಯ ಅಗತ್ಯಗಳಿಗೆ ಬದ್ಧವಾಗಿರುವುದು**<br>**ಬೋಧನೆಯ ಅವಧಿ:**<br>(ಗಂ:ನಿ)<br>05:00<br>**ಪ್ರಾಯೋಗಿಕ ತರಗತಿಗಳ ಅವಧಿ**<br>(ಗಂ:ನಿ)<br>15:00<br>**ಸಂಬಂಧಿಸಿದ ರಾ.ಔ.ಮಾ ಸಂಕೇತ:**<br>HCS/N9909 | * ಕಾರ್ಯಚಟುವಟಿಕೆಗಳನ್ನು ನಾಡಿನ ಕಾಯ್ದೆ ಕಾನೂನುಗಳಿಗೆ ಅನುವಾಗಿ, ಸಂಸ್ಥೆಯ ಮಾರ್ಗದರ್ಶಿ ಸೂತ್ರಗಳು ಮತ್ತು ಕಾರ್ಯವಿಧಾನಗಳಿಗೆ ಬದ್ಧರಾಗಿ ನಡೆಸುವುದು<br>* ನಿಯಮಗಳು ಹಾಗೂ ಕಾರ್ಯವಿಧಾನಗಳ ಬಗ್ಗೆ ಅಗತ್ಯ ಸ್ಪಷ್ಟೀಕರಣಗಳನ್ನು ಮೇಲ್ವಿಚಾರಕರಿಂದ ಹಾಗೂ ಸಂಬಂಧಿಸಿದ ಅಧಿಕೃತ ಸಿಬ್ಬಂದಿಗಳಿಂದ ಪಡೆದುಕೊಳ್ಳುವುದು<br>* ನಿಮ್ಮ ಕೆಲಸಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಈ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳುವುದು<br>* ಈ ಎಲ್ಲವನ್ನೂ ಪರಿಣಾಮಕಾರಿಯಾಗಿ ಜಾರಿಮಾಡಲು ನಿಮ್ಮ ಮೇಲ್ವಿಚಾರಕರಿಗೆ ಮತ್ತು ತಂಡದ ಜೊತೆಗಾರರಿಗೆ/ ಸಹೋದ್ಯೋಗಿಗಳಿಗೆ ಸಹಕಾರ ನೀಡುವುದು.<br>* ಈ ಅಗತ್ಯಗಳಿಗೆ ಧಕ್ಕೆಯಾಗುವಂತಹ ಯಾವುದೇ ಬೆಳವಣಿಗೆ ಗಮನಕ್ಕೆ ಬಂದಲ್ಲಿ ಕೂಡಲೇ ವರದಿ ಮಾಡುವುದು | ಲ್ಯಾಪ್‌ಟಾಪ್, ಬಿಳಿ ಹಲಗೆ, ಮಾರ್ಕರ್, ಪ್ರೊಜೆಕ್ಟರ್ |
| | **ಕಡ್ಡಾಯ ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳು: ಒಟ್ಟು ಅವಧಿ**<br>**ಬೋಧನೆಯ ಅವಧಿ:**<br>(ಗಂ:ನಿ)<br>50:00<br>**ಪ್ರಾಯೋಗಿಕ ತರಗತಿಗಳ ಅವಧಿ**<br>(ಗಂ:ನಿ)<br>220:00 | **ಅಗತ್ಯವಿರುವ ವಿಶಿಷ್ಟ ಸಲಕರಣೆಗಳು:**<br>ಲ್ಯಾಪ್‌ಟಾಪ್, ಬಿಳಿಹಲಗೆ, ಮಾರ್ಕರ್, ಪ್ರೊಜೆಕ್ಟರ್, ಮೊದಲಾರೈಕೆ ಕಿಟ್ | |

ಈ ಪಠ್ಯಕ್ರಮದ ಒಟ್ಟು ಅವಧಿ: 270 ಗಂಟೆಗಳು, 0 ನಿಮಿಷಗಳು

*(ಈ ವ್ಯಾಸಂಗ ಕ್ರಮ/ ಪಠ್ಯಕ್ರಮವು "ಕರಕುಶಲ ಮತ್ತು ನೆಲಹಾಸು ವಲಯದ ಕೌಶಲ್ಯ ಸಮಿತಿ"ಯಿಂದ ಅನುಮೋದಿಸಲ್ಪಟ್ಟಿದೆ)*

## ವಿದ್ಯಾರ್ಹತೆ ಪ್ಯಾಕ್: HCS/Q5412, v1 ರ ಅನ್ವಯ "ಕೈಮಗ್ಗ ನೇಕಾರ – ನೆಲಹಾಸು" ಹುದ್ದೆಯ ತರಬೇತಿದಾರರ ಪೂರ್ವಾಪೇಕ್ಷಿತ ಅರ್ಹತೆಗಳು

| ಕ್ರ. ಸಂ. | ವಿಷಯ | ವಿವರಗಳು |
|---|---|---|
| 1 | **ವಿವರಣೆ** | ವಿದ್ಯಾರ್ಹತೆ ಪ್ಯಾಕ್: HCS/Q5412, v1 ರ ಅನ್ವಯದಂತೆ ಮೇಲೆ ನಮೂದಿಸಲಾದ ಪಠ್ಯಕ್ರಮದ ವಿವರಗಳಿಗೆ ಅನುಗುಣವಾಗಿ ತರಬೇತಿ ಸೇವೆಯನ್ನು ನೀಡಲು ಅನುವು ಮಾಡಿಕೊಡುವುದು. |
| 2 | **ವೈಯುಕ್ತಿಕ ಗುಣಲಕ್ಷಣಗಳು** | ಒಬ್ಬ ಸಮರ್ಥನಾದ ಕೌಶಲ್ಯಯುಕ್ತ ಕುಶಲಕರ್ಮಿಯಾಗಿದ್ದು ತರಬೇತಿಯನ್ನು ನೀಡುವುದರ ಬಗ್ಗೆ ವಿಶೇಷ ಆಸಕ್ತಿ ಹೊಂದಿರಬೇಕು. ಅತ್ಯುತ್ತಮ ಸಂವಹನ ಕೌಶಲ್ಯ ಇರಬೇಕು, ಗುಣಮಟ್ಟ ಹಾಗೂ ಮತ್ತೊಬ್ಬರನ್ನು ಅಭಿವೃದ್ಧಿಪಡಿಸುವ ಆಸಕ್ತಿ, ಶಿಕ್ಷಾರ್ಥಿಗಳಲ್ಲಿ ಸಕಾರಾತ್ಮಕ ಚಿಂತನೆ ಉದ್ದೀಪಿಸುವ ನಾಯಕತ್ವ ಗುಣಗಳು. ಇಂಗ್ಲೀಷ್ ಭಾಷೆಯ ಪ್ರಾಥಮಿಕ ಜ್ಞಾನ ಹಾಗೂ ಸ್ಥಳೀಯ ಭಾಷೆಯನ್ನು ಓದಬಲ್ಲ ಹಾಗೂ ಬರೆಯಬಲ್ಲ ಸಾಮರ್ಥ್ಯ ಇರಬೇಕು. |
| 3 | **ಕನಿಷ್ಠ ವಿದ್ಯಾರ್ಹತೆ** | 10ನೇ ತರಗತಿ ಉತ್ತೀರ್ಣ (ಮೂರು ವರ್ಷಗಳ ಅನುಭವದೊಂದಿಗೆ)/ 5ನೇ ತರಗತಿ ಉತ್ತೀರ್ಣ (ಐದು ವರ್ಷಗಳ ಅನುಭವದೊಂದಿಗೆ). |
| 4ಎ | **ಕಾರ್ಯಕ್ಷೇತ್ರ ಪ್ರಮಾಣೀಕರಣ (ಡೊಮೈನ್ ಸರ್ಟಿಫಿಕೇಶನ್)** | ವಿದ್ಯಾರ್ಹತೆ ಪ್ಯಾಕ್: HCS/Q5412ರ ಅನ್ವಯ "ಕೈಮಗ್ಗ ನೇಕಾರ – ನೆಲಹಾಸು" ಉದ್ಯೋಗಕ್ಕಾಗಿ ಪ್ರಮಾಣಿತ. ಸಂಬಂಧಪಟ್ಟ ಎಸ್ಎಸ್‌ಸಿ ಮಾರ್ಗದರ್ಶಿ ಸೂತ್ರದಂತೆ ಕನಿಷ್ಠ 80% ಅಂಕಗಳು ಪಡೆದಿರಬೇಕು. |
| 4ಬಿ | **ಹುದ್ದೆ ಪ್ರಮಾಣೀಕರಣ (ಪ್ಲಾಟ್‌ಫಾರ್ಮ್ ಸರ್ಟಿಫಿಕೇಶನ್)** | ತರಬೇತುದಾರನನ್ನು ವಿದ್ಯಾರ್ಹತೆ ಪ್ಯಾಕ್: ಖಖಅ/ಕಿ1402ರ ಅನ್ವಯ "ತರಬೇತುದಾರ" ಹುದ್ದೆಗೆ ಪ್ರಮಾಣೀಕರಿಸಲು ಶಿಫಾರಸ್ಸು ಮಾಡಲಾಗಿದೆ. ಸಂಬಂಧಪಟ್ಟ ಎಸ್ಎಸ್‌ಸಿ (ವಲಯ ಕೌಶಲ್ಯ ಸಮಿತಿ) ಮಾರ್ಗದರ್ಶಿ ಸೂತ್ರದಂತೆ ಕನಿಷ್ಠ 60% ಅಂಕಗಳು ಪಡೆದಿರಬೇಕು. |
| 5 | **ಅನುಭವ** | * ಕೈಮಗ್ಗ ನೇಯ್ಗೆ ಉತ್ಪಾದನೆಯಲ್ಲಿ ಮೇಲ್ವಿಚಾರಕರಾಗಿ ಕನಿಷ್ಠ ಮೂರು ವರ್ಷಗಳ (ಹತ್ತನೇ ತರಗತಿ ಉತ್ತೀರ್ಣರಾದವರಿಗೆ) ಹಾಗೂ ಕನಿಷ್ಠ ಐದು ವರ್ಷಗಳ (ಐದನೇ ತರಗತಿ ಉತ್ತೀರ್ಣರಾದವರಿಗೆ) ಅನುಭವದ ಜೊತೆಯಲ್ಲಿ ಕರಕುಶಲ ವಲಯದಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸಿದ/ ತರಬೇತಿ ನೀಡಿದ/ ಸಹಾಯಕರಾಗಿದ್ದ ಅನುಭವ. |

## ಅನುಬಂಧ: ಮೌಲ್ಯಮಾಪನ ಮಾನದಂಡ

| ಮೌಲ್ಯಮಾಪನ ಮಾನದಂಡ | |
|---|---|
| ಉದ್ಯೋಗದ ಹೆಸರು | ಕೈಮಗ್ಗ ನೇಕಾರ – ನೆಲಹಾಸು |
| ವಿದ್ಯಾರ್ಹತೆ ಪ್ಯಾಕ್ | HCS/Q5412, v1.0 |
| ವಲಯ ಕೌಶಲ್ಯ ಸಮಿತಿ | ಕರಕುಶಲ ಮತ್ತು ನೆಲಹಾಸು |

| ಕ್ರ. ಸಂ. | ಮೌಲ್ಯಮಾಪನ ಮಾರ್ಗದರ್ಶಿ ಸೂತ್ರಗಳು |
|---|---|
| 1 | ಪ್ರತಿಯೊಂದು ವಿದ್ಯಾರ್ಹತೆ ಪ್ಯಾಕ್‌ನ ಮೌಲ್ಯಮಾಪನ ಮಾನದಂಡವನ್ನು ವಲಯ ಕೌಶಲ್ಯ ಸಮಿತಿಯು ಸಿದ್ಧಪಡಿಸುತ್ತದೆ. ಪ್ರತಿಯೊಂದು ಸಾಮರ್ಥ್ಯ ಮಾನದಂಡಕ್ಕೂ ಅವುಗಳು ರಾ.ಔ.ಮಾ ದಲ್ಲಿ ಹೊಂದಿರುವ ಮಹತ್ವದ ಆಧಾರದ ಮೇಲೆ ಅಂಕಗಳ ಅನುಪಾತವನ್ನು ತೀರ್ಮಾನಿಸಲಾಗುತ್ತದೆ. ವಲಯ ಕೌಶಲ್ಯ ಸಮಿತಿಯು ಕೂಡಾ ಪ್ರತಿಯೊಂದು ಸಾಮರ್ಥ್ಯ ಮಾನದಂಡಕ್ಕೂ ಅಂಕಗಳ ಅನುಪಾತವನ್ನು ಗೊತ್ತುಮಾಡುತ್ತದೆ. |
| 2 | ವಿಷಯ ಜ್ಞಾನದ ಪರೀಕ್ಷೆಯ ಮೌಲ್ಯಮಾಪನವನ್ನು ಬರಹ ಪರೀಕ್ಷೆ/ ಮೌಖಿಕ ಪರೀಕ್ಷೆ ಅಥವಾ ಎರಡೂ ಪರೀಕ್ಷೆಗಳ ಆಧಾರದ ಮೇಲೆ ನಡೆಸಲಾಗುತ್ತದೆ. ಕೌಶಲ್ಯ ಪರೀಕ್ಷೆಯನ್ನು ಮಾತ್ರಾ ಪ್ರಾಯೋಗಿಕವಾಗಿಯೇ ನಡೆಸಲಾಗುತ್ತದೆ. |
| 3 | ಮೌಲ್ಯಮಾಪನವು ವಲಯ ಕೌಶಲ್ಯ ಸಮಿತಿ (ಎಸ್‌ಎಸ್‌ಸಿ) ತೀರ್ಮಾನಿಸಿದ ಜ್ಞಾನ ಕೋಶಾಧಾರಿತ ಪ್ರಶ್ನೆಗಳ ಆಧಾರದ ಮೇರೆಗೆ ನಡೆಯುತ್ತದೆ. |
| 4ಎ | ವಿದ್ಯಾರ್ಹತೆ ಪ್ಯಾಕ್: HCS/Q5412ರ ಅನ್ವಯ "ಕೈಮಗ್ಗ ನೇಕಾರ – ನೆಲಹಾಸು" ಉದ್ಯೋಗಕ್ಕಾಗಿ ಪ್ರಮಾಣಿತ. ಸಂಬಂಧಪಟ್ಟ ಎಸ್‌ಎಸ್‌ಸಿ ಮಾರ್ಗದರ್ಶಿ ಸೂತ್ರದಂತೆ ಕನಿಷ್ಠ 80% ಅಂಕಗಳು ಪಡೆದಿರಬೇಕು. |
| 4 | ಖಾಸಗಿ ಮೌಲ್ಯಮಾಪನ ಸಂಸ್ಥೆಗಳು ಪರೀಕ್ಷಾ ಕೇಂದ್ರದಲ್ಲಿ/ ತರಬೇತಿ ಕೇಂದ್ರದಲ್ಲಿ ಪ್ರತಿಯೊಬ್ಬ ಶಿಕ್ಷಾರ್ಥಿಗೂ ಪ್ರತ್ಯೇಕವಾದ ಜ್ಞಾನ ಮತ್ತು ಕೌಶಲ್ಯದ ಪ್ರಶ್ನೆಗಳನ್ನು ಸಿದ್ಧಪಡಿಸುತ್ತವೆ. |
| 5 | ವಿದ್ಯಾರ್ಹತೆ ಪ್ಯಾಕ್‌ನ್ನು ಉತ್ತೀರ್ಣರಾಗಲು ಪ್ರತಿಯೊಬ್ಬ ಶಿಕ್ಷಾರ್ಥಿಯೂ ರಾ.ಔ.ಮಾದ ಎಲ್ಲಾ ವಿಭಾಗಗಳ ಮೊತ್ತವಾಗಿ ಕನಿಷ್ಠ 50%ರಷ್ಟು ಅಂಕಿಗಳನ್ನು ಪಡೆದಿರತಕ್ಕದ್ದು. |

| | | | | ಅಂಕಗಳ ಹಂಚಿಕೆ | |
|---|---|---|---|---|---|
| ರಾ.ಔ.ಮಾ.ದ ಮೂಲಾಂಶಗಳು | ಸಾಮರ್ಥ್ಯ ಮಾನದಂಡ | ಒಟ್ಟು ಅಂಕಗಳು | ಗರಿಷ್ಟ | ಸಿದ್ಧಾಂತ | ಪ್ರಾಯೋಗಿಕ ಕೌಶಲ್ಯ |
| **1.HCS/N5415 – ಕೈಮಗ್ಗವನ್ನು ಪರಿಣಾಮಕಾರಿಯಾಗಿ ನಡೆಸುವುದು** | PC1. ನೂಲುಹಾಸು ಹೊಂದಿಸುವುದು (Warp setting) | 100 | 6 | 2 | 4 |
| | PC2. ನೂಲುಹಾಸಿನ ಮೇಲೆ ವಸ್ತುವನ್ನು ಹಾಕುವುದು | | 6 | 2 | 4 |
| | PC3. ನೂಲುಹಾಸಿನ ಮೇಲೆ ನೇಯುವ ತಿಳುವಳಿಕೆ | | 8 | 2 | 4 |
| | PC4. ನೂಲುಹಾಸನ್ನು ರಿಪೇರಿ ಮಾಡಲು ತಿಳಿದಿರಬೇಕು | | 5 | 1 | 4 |
| | PC5. ನೇಯ್ಗೆಯ ಸಲಕರಣೆಯಾದ ಬಾಚಣಿಗೆ(ಕೂಂಬ್)ನ ಸರಿಯಾದ ಬಳಕೆ | | 6 | 2 | 4 |
| | PC6. ತುಂಡಾದ ನೂಲುಹಾಸಿನ ರಿಪೇರಿ ಕೆಲಸ (ತುಂಡರಿಸಿದ ನೂಲುಹಾಸನ್ನು ಹೊಸದರಿಂದ ಬದಲಿಸುವುದು) | | 6 | 2 | 4 |
| | PC7. ತುಂಡಾದ ನೂಲುಹಾಸಿನ ತುದಿಯನ್ನು ಹುಡುಕುವುದು | | 6 | 2 | 4 |
| | PC8. ತುಂಡಾದ ತುದಿಯನ್ನು ಹೆಚ್ಚುವರಿ ನೂಲುಹಾಸಿನ ಮೂಲಕ ಬದಲಿಸಿ/ ಹೊಸೆದು ಸರಿಮಾಡುವುದು | | 6 | 2 | 4 |
| | PC9. ನೇಕಾರನ ಹಿಂದಿರುವ ಮಗ್ಗದ ತೊಲೆ(ಬೀಮ್)ಗೆ ನೂಲುಹಾಸಿನ ಎಳೆಗಳನ್ನು ಎಳೆಯುವುದು | | 6 | 2 | 4 |
| | PC10. ನೂಲುಹಾಸಿನ ಎಳೆಗಳ ಬಿಗಿತ ಸಮನಾಗಿರುವಂತೆ ನೋಡಿಕೊಳ್ಳುವುದು | | 5 | 1 | 4 |
| | PC11. ನೂಲುಹಾಸುಗಳ ಎಳೆಗಳ ಅಂತರವು (ಒಂದು ಇಂಚಿನಲ್ಲಿ ಇಂತಿಷ್ಟೇ ಎಳೆಗಳು) ವಿನ್ಯಾಸಕ್ಕೆ ಅನುಗುಣವಾಗಿ ಇರುವುದನ್ನು ಖಾತ್ರಿಪಡಿಸಿಕೊಳ್ಳುವುದು | | 5 | 1 | 4 |
| | PC12. ವಿನ್ಯಾಸಕ್ಕೆ ಅನುಗುಣವಾಗಿ ಸರಿಯಾದ ಬಣ್ಣದ ನೂಲನ್ನು ಬಳಸುವುದು | | 5 | 1 | 4 |
| | PC13. ವಿನ್ಯಾಸದಂತೆ ನೇಯುವುದು | | 6 | 2 | 4 |
| | PC14. ಅಡ್ಡನೂಲುಗಳ ಹೆಚ್ಚುವರಿ ಓಟವನ್ನು ಖಚಿತ ಪಡಿಸಿಕೊಳ್ಳುವುದು | | 6 | 2 | 4 |
| | PC15. ಮಗ್ಗದ ಮೆಟ್ಟುಸನ್ನೆ (ಪೆಡಲ್)ಗಳನ್ನು ಸರಿಯಾಗಿ ತುಳಿಯುವ ಕೌಶಲ್ಯ ಗಳಿಸಿಕೊಳ್ಳುವುದು | | 6 | 2 | 4 |
| | PC16. ಅಡ್ಡನೂಲುಗಳನ್ನು ಒತ್ತಟ್ಟು ಮಾಡುವ ಒತ್ತಡದ ಪ್ರಮಾಣದ ಬಗ್ಗೆ ಅರಿವಿರಬೇಕು. | | 6 | 2 | 4 |
| | PC17. ಪೈಲ್(ರಾಶಿಯನ್ನು)ನ್ನು ಸರಿಸಮನಾಗಿ ಕತ್ತರಿಸುವ ಅರಿವು ಇರಬೇಕು. | | 6 | 2 | 4 |
| | ಒಟ್ಟು | | **100** | **30** | **70** |

| | | | | ಅಂಕಗಳ ಹಂಚಿಕೆ | |
|---|---|---|---|---|---|
| ರಾ.ಔ.ಮಾ.ದ ಮೂಲಾಂಶಗಳು | ಸಾಮರ್ಥ್ಯ ಮಾನದಂಡ | ಒಟ್ಟು ಅಂಕಗಳು | ಗರಿಷ್ಠ | ಸಿದ್ಧಾಂತ | ಪ್ರಾಯೋಗಿಕ ಕೌಶಲ್ಯ |
| **2. HCS / N9906- ಕೆಲಸದ ಜಾಗ, ಸಲಕರಣೆಗಳು ಹಾಗೂ ಯಂತ್ರಗಳ ನಿರ್ವಹಣೆ** | PC1. ಯಂತ್ರಗಳು, ವಸ್ತುಗಳು, ಸಲಕರಣೆಗಳು ಮೊದಲಾದವನ್ನು ಜತನದಿಂದ ಕಾಪಾಡಿಕೊಳ್ಳುವುದು ಹಾಗೂ ಸೂಕ್ತವಾಗಿ ಬಳಸುವುದು | 100 | 14 | 6 | 8 |
| | PC2. ಕೆಲಸದ ಸ್ಥಳವನ್ನು ಚೊಕ್ಕಟವಾಗಿ ಸುರಕ್ಷಿತವಾಗಿ ಇಟ್ಟುಕೊಳ್ಳುವುದು | | 10 | 4 | 6 |
| | PC3. ನಿಗದಿಪಡಿಸಿದಂತೆ ಯಂತ್ರೋಪಕರಣಗಳ ನಿರ್ವಹಣೆಯನ್ನು ಗೊತ್ತುಮಾಡಿದ ಅವಧಿಯೊಳಗೆ ಪೂರ್ಣಗೊಳಿಸುವುದು. | | 13 | 5 | 8 |
| | PC4. ಒಬ್ಬರ ಹೊಣೆಗಾರಿಕೆಯ ಅಡಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಮಾಡುವುದು ಮತ್ತು/ಅಥವಾ ಶುಚಿ ಮಾಡುವುದು. | | 13 | 5 | 8 |
| | PC5. ಅಸುರಕ್ಷಿತ ಯಂತ್ರೋಪಕರಣಗಳು/ ಘಟನೆಗಳನ್ನು ಕೂಡಲೇ ವರದಿ ಮಾಡುವುದು. | | 12 | 4 | 8 |
| | PC6. ಮಾಡುವ ಕೆಲಸಗಳನ್ನು ಸುಸ್ಥಿತಿಯಲ್ಲಿರುವ ಮತ್ತು ಚೊಕ್ಕಟವಾಗಿರುವ ಸಲಕರಣೆಗಳನ್ನು ಹಾಗೂ ವಿಧಾನಗಳನ್ನು ಬಳಸಿ ಮಾಡುವುದು. | | 11 | 5 | 6 |
| | PC7. ತ್ಯಾಜ್ಯವನ್ನು ಗೊತ್ತುಮಾಡಿದ ಸ್ಥಳದಲ್ಲಿ ಗೊತ್ತು ಮಾಡಿದ ವಿಧಾನದಂತೆ ವಿಸರ್ಜಿಸುವುದು. | | 14 | 5 | 8 |
| | PC8. ಯಂತ್ರೋಪಕರಣ/ ಸಲಕರಣೆಗಳನ್ನು ಬಳಸಿದ ನಂತರ ಶುಚಿಗೊಳಿಸಿ ಸ್ವಸ್ಥಾನದಲ್ಲಿ ಇಡುವುದು. | | 13 | 5 | 8 |
| | ಒಟ್ಟು | | **100** | **40** | **60** |
| | | | | ಅಂಕಗಳ ಹಂಚಿಕೆ | |
| ರಾ.ಔ.ಮಾ.ದ ಮೂಲಾಂಶಗಳು | ಸಾಮರ್ಥ್ಯ ಮಾನದಂಡ | ಒಟ್ಟು ಅಂಕಗಳು | ಗರಿಷ್ಠ | ಸಿದ್ಧಾಂತ | ಪ್ರಾಯೋಗಿಕ ಕೌಶಲ್ಯ |
| **3. HCS / N9907- ಕೆಲಸದ ಜಾಗದಲ್ಲಿ ಆರೋಗ್ಯ, ಸುರಕ್ಷತೆ ಹಾಗೂ ಭದ್ರತೆಯ ನಿರ್ವಹಣೆ** | PC1. ಚೂಪಾದ ಯಂತ್ರೋಪಕರಣ, ಸಲಕರಣೆಗಳಿಂದ ಗಾಯಗಳಾಗಬಹುದಾದ ಸಾಧ್ಯತೆಗಳಿರುವ ಚಟುವಟಿಕೆಗಳನ್ನು ಗುರುತಿಸುವುದು. | 100 | 10 | 4 | 6 |
| | PC2. ಮುಖ ಗವುಸು ಮೊದಲಾದ ವೈಯುಕ್ತಿಕ ಸುರಕ್ಷತಾ ಸಲಕರಣೆಗಳ ಸುಸ್ಥಿತಿಯನ್ನು ಕಾಯ್ದುಕೊಳ್ಳುವುದು | | 12 | 5 | 7 |
| | PC3. ಕೆಲಸದ ಸ್ಥಳದಲ್ಲಿ ನೈರ್ಮಲ್ಯವಿಲ್ಲದ ಹಾಗೂ ಅಪಾಯಕಾರಿಯಾದ ಸ್ಥಳಗಳನ್ನು ಗುರುತಿಸುವುದು. | | 12 | 5 | 7 |
| | PC4. ಯಂತ್ರಗಳ ಮತ್ತು ಅವುಗಳ ಭಾಗಗಳ ಸವಕಳಿಯಿಂದಾಗಿ ಉಂಟಾಗಬಹುದಾದ ಅಪಾಯಗಳನ್ನು ಗುರುತಿಸಲು ನಿಯಮಿತವಾಗಿ ತಪಾಸಣೆ ನಡೆಸುವುದು | | 12 | 5 | 7 |
| | PC5. ನಾವು ಬಳಸುವ ಸಾಮಾಗ್ರಿಗಳು, ಕೆಲಸದ ಜಾಗ ಅಥವಾ ಕಾರ್ಯವಿಧಾನಗಳಲ್ಲಿ ಇರಬಹುದಾದ ಅಪಾಯ ಉಂಟುಮಾಡಬಲ್ಲ ಸ್ಥಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ವರದಿ ಮಾಡುವುದು. | | 12 | 5 | 7 |
| | PC6. ಸಲಕರಣೆಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇದ್ದಲ್ಲಿ ಸಂಬಂಧಿಸಿದ ಮೇಲ್ವಿಚಾರಕರಿಗೆ ಕೂಡಲೇ ಮಾಹಿತಿ ನೀಡುವುದು. | | 12 | 5 | 7 |
| | PC7. ಸಲಕರಣೆಗಳ ಮೇಲೆ ನೀಡಿರುವ ಬಳಸುವ ವಿಧಾನಗಳ ಬಗ್ಗೆ ವಿಶೇಷ ಕಾಳಜಿ ತೋರಿ, ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು | | 10 | 4 | 6 |

| | | | | | |
|---|---|---|---|---|---|
| | PC8. ರಾಸಾಯನಿಕಗಳು ನೆಲದ ಮೇಲೆ ಚೆಲ್ಲಿ ಅಪಘಾತಗಳು ಉಂಟಾಗುವ ಸನ್ನಿವೇಶಗಳು ಹುಟ್ಟದಂತೆ ಕೆಲಸದ ಪರಿಸರವನ್ನು ಚೊಕ್ಕಟವಾಗಿಯೂ ಸುರಕ್ಷಿತವಾಗಿಯೂ ಇಟ್ಟುಕೊಳ್ಳುವುದು | | 10 | 4 | 6 |
| | PC9. ವೈಯುಕ್ತಿಕ ನೈರ್ಮಲ್ಯದ ಅತ್ಯುತ್ತಮ ಮಟ್ಟವನ್ನು ಸದಾ ಪಾಲಿಸುತ್ತಾ ಕಾಯ್ದುಕೊಳ್ಳುವುದು. | | 10 | 3 | 7 |
| | **ಒಟ್ಟು** | | **100** | **40** | **60** |
| | | | | **ಅಂಕಗಳ ಹಂಚಿಕೆ** | |
| **ರಾ.ಔ.ಮಾ.ದ ಮೂಲಾಂಶಗಳು** | **ಸಾಮರ್ಥ್ಯ ಮಾನದಂಡ** | **ಒಟ್ಟು ಅಂಕಗಳು** | **ಗರಿಷ್ಟ** | **ಸಿದ್ಧಾಂತ** | **ಪ್ರಾಯೋಗಿಕ ಕೌಶಲ್ಯ** |
| **2. HCS / N9908- ತಂಡದಲ್ಲಿ ಕೆಲಸ ಮಾಡುವುದು** | PC1. ಒಟ್ಟು ಪ್ರಕ್ರಿಯೆಯಲ್ಲಿ ತನ್ನ ಸಂಪೂರ್ಣ ಪಾತ್ರವನ್ನು ಅರಿತಿದ್ದು ಹೊಣೆಗಾರಿಕೆ ಹೊಂದಿರುವುದು. | 100 | 10 | 4 | 6 |
| | PC2. ಎಲ್ಲಾ ಜವಾಬ್ದಾರಿಗಳನ್ನೂ ಹೊಣೆಗಾರಿಕೆಯಿಂದ ನಿಭಾಯಿಸುವುದು | | 10 | 4 | 6 |
| | PC3. ಪ್ರಕ್ರಿಯೆಯಲ್ಲಿ ಎದುರಾಗುವ ಯಾವುದೇ ಸಮಸ್ಯೆಗಳನ್ನು ತಕ್ಷಣವೇ ವರದಿ ಮಾಡುವುದು | | 10 | 4 | 6 |
| | PC4. ಇನ್ನಿತರ ಸಹೋದ್ಯೋಗಿಗಳ ಹಾಗೂ ಸಹವರ್ತಿಗಳ ಜೊತೆ ಸೌಜನ್ಯದಿಂದ ಮಾತಾಡುವುದು. | | 10 | 4 | 6 |
| | PC5. ತಮ್ಮ ಚಟುವಟಿಕೆಗಳ ಪ್ರಗತಿಯ ಬಗ್ಗೆ ಪ್ರತಿದಿನದ ವರದಿ ಸಲ್ಲಿಸುವುದು | | 10 | 4 | 6 |
| | PC6. ವಿಭಿನ್ನ ಕೆಲಸದ ಪರಿಸರಗಳಿಗೆ ಹೊಂದಿಕೊಳ್ಳುವುದು | | 10 | 4 | 6 |
| | PC7. ಮತ್ತೊಬ್ಬರ ದೃಷ್ಟಿಕೋನಕ್ಕೆ ಸೂಕ್ತ ಮನ್ನಣೆ/ ಮಹತ್ವ ನೀಡುವುದು. | | 10 | 4 | 6 |
| | PC8. ಸಂಘರ್ಷದ ಸನ್ನಿವೇಶಗಳನ್ನು ತಪ್ಪಿಸುವುದು | | 10 | 4 | 6 |
| | PC9. ಪ್ರಕ್ರಿಯೆಯ ಕಾರ್ಯವಿಧಾನದ ಹೊಸ ಬಗೆಗಳನ್ನು ಅಭಿವೃದ್ಧಿ ಪಡಿಸುವುದು | | 10 | 4 | 6 |
| | PC10. ಪ್ರಕ್ರಿಯೆಯ ಕ್ಷಮತೆಯನ್ನು ಹೆಚ್ಚಿಸಲು ಬಳಕೆಯಲ್ಲಿರುವ ತಂತ್ರ/ ವಿಧಾನಗಳನ್ನು ಸುಧಾರಿಸುವುದು | | 10 | 4 | 6 |
| | **ಒಟ್ಟು** | | **100** | **40** | **60** |
| | | | | **ಅಂಕಗಳ ಹಂಚಿಕೆ** | |
| **ರಾ.ಔ.ಮಾ.ದ ಮೂಲಾಂಶಗಳು** | **ಸಾಮರ್ಥ್ಯ ಮಾನದಂಡ** | **ಒಟ್ಟು ಅಂಕಗಳು** | **ಗರಿಷ್ಟ** | **ಸಿದ್ಧಾಂತ** | **ಪ್ರಾಯೋಗಿಕ ಕೌಶಲ್ಯ** |
| **3. HCS / N9909- ಕೆಲಸದ ಜಾಗದಲ್ಲಿ ಸಲಕರಣೆಗಳು ಹಾಗೂ ಯಂತ್ರಗಳ ನಿರ್ವಹಣೆ** | PC1. ಚೂಪಾದ ಯಂತ್ರೋಪಕರಣ, ಸಲಕರಣೆಗಳಿಂದ ಗಾಯಗಳಾಗಬಹುದಾದ ಸಾಧ್ಯತೆಗಳಿರುವ ಚಟುವಟಿಕೆಗಳನ್ನು ಗುರುತಿಸುವುದು. | 100 | 10 | 2 | 8 |
| | PC2. ಮುಖ ಗವುಸು ಮೊದಲಾದ ವೈಯುಕ್ತಿಕ ಸುರಕ್ಷತಾ ಸಲಕರಣೆಗಳ ಸುಸ್ಥಿತಿಯನ್ನು ಕಾಯ್ದುಕೊಳ್ಳುವುದು | | 12 | 2 | 8 |
| | PC3. ಕೆಲಸದ ಸ್ಥಳದಲ್ಲಿ ನೈರ್ಮಲ್ಯವಿಲ್ಲದ ಹಾಗೂ ಅಪಾಯಕಾರಿಯಾದ ಸ್ಥಳಗಳನ್ನು ಗುರುತಿಸುವುದು. | | 12 | 2 | 8 |

| | | | | | |
|---|---|---|---|---|---|
| | PC4. ಯಂತ್ರಗಳ ಮತ್ತು ಅವುಗಳ ಭಾಗಗಳ ಸವಕಳಿಯಿಂದಾಗಿ ಉಂಟಾಗಬಹುದಾದ ಅಪಾಯಗಳನ್ನು ಗುರುತಿಸಲು ನಿಯಮಿತವಾಗಿ ತಪಾಸಣೆ ನಡೆಸುವುದು. | | 8 | 2 | 6 |
| | PC5. ನಾವು ಬಳಸುವ ಸಾಮಾಗ್ರಿಗಳು, ಕೆಲಸದ ಜಾಗ ಅಥವಾ ಕಾರ್ಯವಿಧಾನಗಳಲ್ಲಿ ಇರಬಹುದಾದ ಅಪಾಯ ಉಂಟುಮಾಡಬಲ್ಲ ಸ್ಥಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ವರದಿ ಮಾಡುವುದು. | | 12 | 4 | 8 |
| | PC6. ಸಲಕರಣೆಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇದ್ದಲ್ಲಿ ಸಂಬಂಧಿಸಿದ ಮೇಲ್ವಿಚಾರಕರಿಗೆ ಕೂಡಲೇ ಮಾಹಿತಿ ನೀಡುವುದು. | | 12 | 4 | 8 |
| | PC7. ಸಲಕರಣೆಗಳ ಮೇಲೆ ನೀಡಿರುವ ಬಳಸುವ ವಿಧಾನಗಳ ಬಗ್ಗೆ ವಿಶೇಷ ಕಾಳಜಿ ತೋರಿ, ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು | | 12 | 2 | 6 |
| | PC8. ರಾಸಾಯನಿಕಗಳು ನೆಲದ ಮೇಲೆ ಚೆಲ್ಲಿ ಅಪಘಾತಗಳುಂಟಾಗುವ ಸನ್ನಿವೇಶಗಳು ಹುಟ್ಟದಂತೆ ಕೆಲಸದ ಪರಿಸರವನ್ನು ಚೊಕ್ಕಟವಾಗಿಯೂ ಸುರಕ್ಷಿತವಾಗಿಯೂ ಇಟ್ಟುಕೊಳ್ಳುವುದು | | 8 | 2 | 6 |
| | PC9. ವೈಯುಕ್ತಿಕ ನೈರ್ಮಲ್ಯದ ಅತ್ಯುತ್ತಮ ಮಟ್ಟವನ್ನು ಸದಾ ಪಾಲಿಸುತ್ತಾ ಕಾಯ್ದುಕೊಳ್ಳುವುದು. | | 8 | 2 | 6 |
| | PC10. ಕೆಲಸದ ಸ್ಥಳವಲ್ಲಿ ಯಾವುದೇ ಅವಘಡಗಳು ಆಗದಂತೆ ನೋಡಿಕೊಳ್ಳಿ | | 8 | 2 | 6 |
| | PC11. ಎಲ್ಲಾ ಸುರಕ್ಷತಾ ನಿಯಮಗಳಿಗೆ ಬದ್ಧವಾಗಿ ನಡೆದುಕೊಳ್ಳುವುದು ಮತ್ತು ಆ ಮೂಲಕ ಯಾವುದೇ ವ್ಯಕ್ತಿ ಹಾಗೂ ವಸ್ತುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು | | 6 | 1 | 5 |
| | ಒಟ್ಟು ಅಂಕಗಳು | | **100** | **25** | **75** |

**SANKALP**

Ministry of Skill Development & Entrepreneurship

# ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

ಡೈರಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ,
ಹೊಂಬೇಗೌಡ ನಗರ, ಬೆಂಗಳೂರು-560029
**ಅಧಿಕೃತ ಜಾಲತಾಣ : www.kaushalkar.com**